# ಅನುದಾನ ಬೇಡ, ಮೀಸಲು ಕೊಡಿ



ಇಳಕಲ್ಲ: ಪಂಚಮಸಾಲಿ ಸಮಾಜಕ್ಕೆ ಮೀಸಲಾತಿಗೆ ಆಗ್ರಹಿಸಿ ಪಟ್ಟಣಕ್ಕೆ ಆಗಮಿಸಿದ ಪಾದಯಾತ್ರೆಗೆ ಅದ್ದೂರಿ ಸ್ವಾಗತ ಕೋರಲಾಯಿತು.

**ಇಳಕಲ್ಲ:** ಯಡಿಯೂರಪ್ಪನವರೇ, ನೀವು ನೀಡಿದ ಅನುದಾನದಿಂದ ನಮ್ಮ ಮಠದ ಅಭಿವೃದ್ಧಿ ಸಾಧ್ಯವೇ ಹೊರತು ಸಮಾಜದ ಅಭಿವೃದ್ಧಿಯಾಗಲ್ಲ. ಅದಕ್ಕಾಗಿ ನಿಮ್ಮ ಅನುದಾನದ ಅಗತ್ಯತೆ ನಮಗಿಲ್ಲ, ಅದನ್ನು ಮರಳಿ ತೆಗೆದುಕೊಂಡು ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕೊಡಿ. ಮೀಸಲಾತಿ ಸಿಗುವವರೆಗೆ ನಮ್ಮ ಪಾದಯಾತ್ರೆ ಮುಂದುವರಿಯುವುದು ಎಂದು ಕೂಡಲಸಂಗಮ ಪಂಚಮಸಾಲಿ ಜಗದ್ಗುರು ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಪಂಚಮಸಾಲಿ ಸಮಾಜಕ್ಕೆ ಮೀಸಲಾತಿಗೆ ಆಗ್ರಹಿಸಿ ಬೃಹತ್ ಪಾದಯಾತ್ರೆ ಶುಕ್ರವಾರ ಪಟ್ಟಣಕ್ಕೆ ಆಗಮಿಸಿದ್ದ ವೇಳೆ ಮಾತನಾಡಿ, ನಮ್ಮ ಸಮುದಾಯದವರನ್ನು ಮುಖ್ಯಮಂತ್ರಿ, ಸಚಿವರನ್ನಾಗಿ ಮಾಡಿದರೂ ಅಷ್ಟೆ. ಆದರೆ, ನಮ್ಮ ಸಮುದಾಯಕ್ಕೆ ಮೀಸಲಾತಿ ಹೊರತು ಬೇರೇನೂ ಬೇಕಿಲ್ಲ. ನಮ್ಮ ಈ ಹೋರಾಟ ಪಕ್ಷಾತೀತವಾಗಿದ್ದು ಯಾವುದೇ ಪಕ್ಷಕ್ಕೆ ಸೀಮಿತಗೊಂಡಿಲ್ಲ. ಮುರುಗೇಶ ನಿರಾಣಿ ಶಾಸಕರಿದ್ದಾಗ ಬೆಂಬಲ ಸೂಚಿಸಿ ನಿಮ್ಮ ಜತೆ ನಾವಿದ್ದೇವೆಂದು ಆಶ್ವಾಸನೆ ನೀಡಿದ್ದರು. ಸಚಿವರಾದ ಕೂಡಲೇ ಮಾತು ಬದಲಿಸಿ ಪಾದಯಾತ್ರೆ ಇಲ್ಲ, ಸ್ಥಗಿತಗೊಂಡಿದೆ ಎಂದು ಗೊಂದಲ ಹೇಳಿಕೆ ನೀಡುತ್ತಿರುವುದು ವಿಷಾದಕರ ಸಂಗತಿ ಎಂದರು.

ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, ನಮ್ಮ ಸಮುದಾಯಕ್ಕೆ 2ಎ ಮೀಸಲಾತಿಗೆ ಸುಮಾರು 20 ವರ್ಷಗಳಿಂದ ಹೋರಾಟ ಮಾಡುತ್ತಲೇ ಬಂದಿದ್ದೇವೆ. ಪ್ರತಿ ಬಾರಿ ಆಶ್ವಾಸನೆ ನೀಡುತ್ತ ನಮ್ಮ ಹೋರಾಟ ಹತ್ತಿಕ್ಕುತ್ತಿದ್ದಾರೆ. ಆದರೆ ಈಗಿನ ನಮ್ಮ ಹೋರಾಟ 2ಎ ಮೀಸಲಾತಿ ಪಡೆಯುವವರೆಗೂ ನಿಲ್ಲಲ್ಲ. ಇದಕ್ಕಾಗಿ ನಾವು ಪ್ರಾಣ ತ್ಯಾಗಕ್ಕೂ ಸಿದ್ಧ. ಈ ನಮ್ಮ ಹೋರಾಟಕ್ಕೆ ಪ್ರತಿಯೊಂದು ಜಿಲ್ಲೆಯ ಜನಪ್ರತಿನಿಧಿಗಳು ಬೆಂಬಲ ಸೂಚಿಸಿದ್ದಾರಲ್ಲದೇ ಅವಶ್ಯಕತೆ ಬಿದ್ದರೆ ಎಲ್ಲರೂ ನಮ್ಮ ಹೋರಾಟದಲ್ಲಿ ಕೈಜೋಡಿಸುತ್ತಾರೆ ಎಂದರು.